ರಾಜ್ಯದ ಬಿಜೆಪಿ ಸರ್ಕಾರದ ಬಗ್ಗೆ ಜನರು ರೋಸಿ ಹೋಗಿದ್ದಾರೆ. ಕಾಂಗ್ರೆಸ್ ಕಾರ್ಯಕರ್ತರು ರಾಜ್ಯ ಸರ್ಕಾರದ ದುರಾಡಳಿತ ಕುರಿತು ಜನರಲ್ಲಿ ಜಾಗೃತಿ ಮೂಡಿಸಬೇಕು. ಸರ್ಕಾರದ ಕಾರ್ಯವೈಖರಿ ಇಡೀ ನಾಡಿನ ಜನರಿಗೆ ಗೊತ್ತಾಗಬೇಕು.
● **ಡಿ.ಕೆ.ಶಿವಕುಮಾರ್** ಕೆಪಿಸಿಸಿ ಅಧ್ಯಕ್ಷ

ಕನ್ನಡಪ್ರಭ
ಬುಧವಾರ 28.9.2022

## ಸಣ್ ಸುದ್ದಿ

### ಪ್ರಧಾನಿ ಹುಟ್ಟುಹಬ್ಬ ಹಿನ್ನೆಲೆ: ಹೂಡಿ ವಾರ್ಡಲ್ಲಿ ಕೆರೆ ಸ್ವಚ್ಛತೆ



**ಕೆ.ಆರ್.ಪುರ:** ಬೆಂಗಳೂರು ಕೇಂದ್ರ ಜಿಲ್ಲಾ ಎಸ್ಸಿ ಮೋರ್ಚಾದ ವತಿಯಿಂದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ 72ನೇ ಹುಟ್ಟುಹಬ್ಬದ ಅಂಗವಾಗಿ ಶಾಸಕ ಅರವಿಂದ ಲಿಂಬಾವಳಿ ನೇತೃತ್ವದಲ್ಲಿ ಮಹದೇವಪುರದ ಹೂಡಿ ವಾರ್ಡಿನ ಸಾದರಮಂಗಲ ಕೆರೆಯನ್ನು ಸ್ವಚ್ಛಗೊಳಿಸಲಾಯಿತು. ನಂತರ ಬೆಂಗಳೂರು ಕೇಂದ್ರ ಜಿಲ್ಲಾ ಎಸ್ಸಿ ಮೋರ್ಚಾ ಅಧ್ಯಕ್ಷ ಎಚ್.ವಿ.ಮಂಜುನಾಥ್ ಮಾತನಾಡಿ, ಶಾಸಕ ಅರವಿಂದ ಲಿಂಬಾವಳಿ ಅವರು ಮಹದೇವಪುರದ ಹಲವು ಕೆರೆಗಳನ್ನು ಅಭಿವೃದ್ಧಿಪಡಿಸಿ ಸಾರ್ವಜನಿಕರ ಬೇಡಿಕೆಗೆ ಸ್ಪಂದಿಸಿದ್ದಾರೆ. ಅವರ ಸಲಹೆಯಂತೆ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಕೆರೆಯ ಅಂಗಳದಲ್ಲಿ ಮತ್ತು ಕಲ್ಯಾಣಿಯನ್ನು ಸ್ವಚ್ಛಗೊಳಿಸಿದ್ದೇವೆ ಎಂದು ಹೇಳಿದರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ 75 ಯೂನಿಟ್‌ವರೆಗೂ ಉಚಿತವಾಗಿ ವಿದ್ಯುತ್ ಪೂರೈಸುವ ಯೋಜನೆ ಹಾಗೂ ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಕರ್ನಾಟಕದ ಹಲವಾರು ಭಾಗಗಳಿಗೆ ಬಂದಿದ್ದು, ಅವರು ಬಂದಿದ್ದ ಸ್ಥಳಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಈಗಾಗಲೇ ₹25 ಕೋಟಿ ಮಂಜೂರು ಮಾಡಿದೆ ಎಂದು ತಿಳಿಸಿದರು.

### ಗ್ರಾಮೋದ್ಯೋಗ ಸಂಘದಿಂದ ಅಲ್ಪಾವಧಿ ಸಾಲ: ಮಂಜುನಾಥ್



**ಆನೇಕಲ್:** ತಾಲೂಕಿನ ಗ್ರಾಮೋದ್ಯೋಗ ಕಸುಬುದಾರರ ಕೈಗಾರಿಕಾ ವಿವಿಧೋದ್ದೇಶ ಸಹಕಾರ ಸಂಘ 300ಕ್ಕೂ ಹೆಚ್ಚು ಸದಸ್ಯರನ್ನು ಹೊಂದಿದ್ದು, ಸದಸ್ಯರ ಅಭ್ಯುದಯಕ್ಕಾಗಿ ಅಲ್ಪಾವಧಿ ಸಾಲ ನೀಡಲು ಕ್ರಿಯಾ ಯೋಜನೆಯನ್ನು ಸಲ್ಲಿಸಲಾಗಿದೆ ಎಂದು ಅಧ್ಯಕ್ಷ ಪಿ.ಮಂಜುನಾಥ್ ತಿಳಿಸಿದರು. ಅವರು ಸಂಘದ ಆವರಣದಲ್ಲಿ ನಡೆದ 44ನೆಯ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿ, ಗುಡಿ ಕೈಗಾರಿಕೆ ನಶಿಸಿ ಹೋಗುವ ಹಂತದಲ್ಲಿದೆ. ಪ್ಲಾಸ್ಟಿಕ್ ಹಾಗೂ ಮಣ್ಣಿನಲ್ಲಿ ಸಹಜವಾಗಿ ಕರಗದ ಹಲವು ಉತ್ಪನ್ನಗಳು ಇವುಗಳ ಸ್ಥಳವನ್ನು ಆಕ್ರಮಿಸಿಕೊಂಡಿದೆ. ಈ ನೆಲ, ಜಲ ನಮ್ಮದಾಗಿದ್ದು, ಉತ್ತಮ ಪರಿಸರ ಕಾಪಾಡುವ ಜವಾಬ್ದಾರಿ ನಮ್ಮ ಮೇಲಿದೆ ಎಂದರು. ದಿನ ನಿತ್ಯ ವ್ಯಾಪಾರ ವಹಿವಾಟು ನಡೆಸುವವರು ಅಲ್ಪಾವಧಿ ಸಾಲ ಪಡೆದು ಅದನ್ನು ಅವಧಿಯೊಳಗೆ ಮರುಪಾವತಿ ಮಾಡಬೇಕು. ಸಾಲ ತೀರಿದಲ್ಲಿ ಹೊಸ ಸದಸ್ಯರಿಗೆ ಸೌಲಭ್ಯವನ್ನು ವಿಸ್ತರಿಸಬಹುದು. ಸಹಕಾರಿ ತತ್ವದಲ್ಲಿ ಎಲ್ಲರಿಗೂ ಸಮಪಾಲು, ಸಮಬಾಳು ಎಂಬುದನ್ನು ಅರಿತು ನಡೆಯಬೇಕಿದೆ. ಸದಸ್ಯರ ಪ್ರತಿಭಾವಂತ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ನೀಡುವ ಸಲಹೆಯನ್ನು ಮಹಾಸಭೆಯಲ್ಲಿ ಅಂಗೀಕರಿಸಲಾಗಿದೆ ಎಂದು ಹೇಳಿದರು. ಉಪಾಧ್ಯಕ್ಷೆ ಸಿ.ಪ್ರೇಮಾ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪಿ.ಶ್ರೀನಿವಾಸ್, ನಿರ್ದೇಶಕರಾದ ಗೋಪಾಲಕೃಷ್ಣ, ಸಿ.ವೆಂಕಟೇಶ್, ರಮಾಮಣಿ, ಉಮಾಶಂಕರ್, ಕೆ.ಶ್ರೀನಿವಾಸ್, ಸುಬ್ರಮಣಿ, ಮುನಿರಾಜು, ಚಂದ್ರಶೇಖರ್ ಭಾಗವಹಿಸಿದ್ದರು.



ಆನೇಕಲ್ ಸಮೀಪದ ಎಲೆಕ್ಟ್ರಾನಿಕ್ ಸಿಟಿ ಕಾವೇರಿ ಹಾಸ್ಪಿಟಲ್ ವತಿಯಿಂದ ವಿಶ್ವ ಹೃದಯ ದಿನ ಅಂಗವಾಗಿ ಜಾಗೃತಿ ಮೂಡಿಸಲು ವಾಕಥಾನ್, ಸೈಕ್ಲಥಾನ್, ಡಾನ್ಸ್ ಥೆರಪಿ ನಡೆಸಲಾಯಿತು. ಸಿಇಒ ಎಸ್.ವಿಜಯಭಾಸ್ಕರನ್, ವಿಲ್‌ಫ್ರೆಡ್ ಸ್ಯಾಮ್ಸನ್, ಡಾ। ನಾಗೇಶ್ ಹಾಜರಿದ್ದರು.



ಭಾರತದಲ್ಲಿ ಬ್ರಿಟನ್‌ನ ವ್ಯಾಪಾರ ಮತ್ತು ಹೂಡಿಕೆ ಕುರಿತ ಬ್ರಿಟನ್ ಸಂಸದೀಯ ಸರ್ವಪಕ್ಷಗಳ ಸಮಿತಿ ಉಪಾಧ್ಯಕ್ಷ ಲಾರ್ಡ್ ವೇವರ್ಲಿ ಅವರು ವಿಪಕ್ಷ ನಾಯಕ ಸಿದ್ದರಾಮಯ್ಯರನ್ನು ಭೇಟಿ ಮಾಡಿದರು. ಸಮಗ್ರಾಭಿವೃದ್ಧಿ ಟ್ರಸ್ಟ್ ಸಿಇಒ ಡಾ। ಸ್ನೇಹಾ ರಾಕೇಶ್ ಇದ್ದರು.




ಭಾರತದ ನಂ.1 ಕಾರ್ ಡೀಲರ್ ಆದ ಪಿಪಿಎಸ್ ಮಹೀಂದ್ರಾದ ಸ್ಕಾರ್ಪಿಯೋ ಎನ್ ಮೆಗಾ ಡೆಲಿವರಿ ಕಾರ್ಯಕ್ರಮ ಈಚೆಗೆ ಇಂದಿರಾ ನಗರ ಕ್ಲಬ್‌ನಲ್ಲಿ ಅದ್ದೂರಿಯಾಗಿ ಜರುಗಿತು. ಪಿಪಿಎಸ್ ಮಹೀಂದ್ರಾ ಸಿಇಒ ಅಶ್ವಿನಿ ಹಾಗೂ ಪಿಪಿಎಸ್ ಮಹೀಂದ್ರಾದ ಸಿಒಒ ಅನಿಲ್ ಇದ್ದರು.

# ಶಿಕ್ಷಣ ಸಂಸ್ಥೆಗಳು ವಿಶ್ವದರ್ಜೆಗೇರಲಿ: ರಾಷ್ಟ್ರಪತಿ

## ಅಮೃತೋತ್ಸವ ಮುಗಿದಿದೆ, ಮುಂದಿನ 25 ವರ್ಷ ಬಹಳ ಮುಖ್ಯ | ಸೇಂಟ್ ಜೋಸೆಫ್ ವಿವಿ ಉದ್ಘಾಟಿಸಿದ ದ್ರೌಪದಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಸ್ವಾತಂತ್ರ್ಯದ ಅಮೃತೋತ್ಸವ ಪೂರೈಸಿರುವ ಭಾರತದ ಪ್ರತಿಯೊಬ್ಬ ಪ್ರಜೆಗೆ, ವಿಶೇಷವಾಗಿ ನಮ್ಮ ಯುವಜನರ ಪಾಲಿಗೆ ಮುಂದಿನ 25 ವರ್ಷಗಳು ಬಹಳ ಮುಖ್ಯವಾದವು. ಈ ಅವಧಿಯಲ್ಲಿ ಭಾರತದ ಅಭಿವೃದ್ಧಿ ವಿಚಾರ ನಮ್ಮೆಲ್ಲರ ರಾಷ್ಟ್ರೀಯ ಗುರಿಯಾಗಬೇಕು ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಕರೆ ನೀಡಿದ್ದಾರೆ.

ನಗರದ ಲ್ಯಾಂಗ್‌ಫೋರ್ಡ್ ರಸ್ತೆಯ 'ಸೇಂಟ್ ಜೋಸೆಫ್ ವಿಶ್ವವಿದ್ಯಾಲಯ'ದ ಆವರಣದಲ್ಲಿ ಮಂಗಳವಾರ ಅಧಿಕೃತವಾಗಿ ವಿಶ್ವವಿದ್ಯಾಲಯವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಭಾರತ ಮುಂದಿನ ದಶಕಗಳಲ್ಲಿ ಅತಿ ಹೆಚ್ಚು ಯುವ ಜನಾಂಗವನ್ನು ಹೊಂದಿರಲಿದೆ. ಅವರಿಗೆ ನಾವು ಎಷ್ಟು ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸಬಲ್ಲೆವು ಎಂಬ ಸಾಮರ್ಥ್ಯದ ಮೇಲೆ ನಮ್ಮ ಯುವ ಜನರ ಹಾಗೂ ದೇಶದ ಭವಿಷ್ಯ ನಿರ್ಧಾರವಾಗಲಿದೆ. ಹಾಗಾಗಿ ಈ ಅವಧಿಯಲ್ಲಿ ದೇಶದ ಪ್ರತಿಯೊಂದು ಶಿಕ್ಷಣ ಸಂಸ್ಥೆಗಳು ವಿಶ್ವದರ್ಜೆಯ ಶಿಕ್ಷಣ ಸಂಸ್ಥೆಗಳಾಗಿ ಬೆಳೆಯುವ ಗುರಿ ಇಟ್ಟುಕೊಂಡು ಸಾಗಬೇಕು. ಇದರಿಂದ ಭಾರತ ಭವಿಷ್ಯದಲ್ಲಿ ಜ್ಞಾನದ ಮಹಾಶಕ್ತಿಯಾಗಿ ಹೊರಹೊಮ್ಮುವುದರಲ್ಲಿ ಸಂಶಯವಿಲ್ಲ ಎಂದರು.

ದೇಶದ ಅಭಿವೃದ್ಧಿಗೆ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಅಭಿವೃದ್ಧಿ ಬಹಳ ಮುಖ್ಯ. ಈ ಕ್ಷೇತ್ರದಲ್ಲಿ ಸಾಧನೆಗೆ ಕೊನೆ ಇಲ್ಲ. ನಮ್ಮ ವಿದ್ಯಾರ್ಥಿಗಳು ಹೊಸ ಸಂಶೋಧನೆ, ನಾವೀನ್ಯತೆ, ಆವಿಷ್ಕಾರಗಳನ್ನು ನಡೆಸಬೇಕು. ಭಾರತವನ್ನು ಪ್ರತಿ ಕ್ಷೇತ್ರದಲ್ಲೂ ಅಭಿವೃದ್ಧಿಯೊಂದಿಗೆ ಸ್ವಾವಲಂಬಿ ರಾಷ್ಟ್ರವಾಗಿಸುವುದು ನಮ್ಮ ರಾಷ್ಟ್ರೀಯ ಗುರಿಯಾಗಬೇಕು ಎಂದು ಹೇಳಿದರು.

ಸಾಮಾಜಿಕ ಪಾರದರ್ಶಕತೆಗೆ ಶಿಕ್ಷಣ ಬಹಳ ಮುಖ್ಯ. ದೇಶದ ಬೇಡಿಕೆಗಳನ್ನು ಈಡೇರಿಸುವ, ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ವಿದ್ಯಾರ್ಥಿಗಳನ್ನು ತಯಾರು ಮಾಡುವುದು ಶಿಕ್ಷಣ ಸಂಸ್ಥೆಗಳ ಜವಾಬ್ದಾರಿ. ವಿದ್ಯಾರ್ಥಿಗಳು ಮಹತ್ವಾಕಾಂಕ್ಷಿಗಳಾಗಿರುತ್ತಾರೆ. ವಿಶ್ವವಿದ್ಯಾಲಯಗಳು ಅವರ ಆಕಾಂಕ್ಷೆಗಳಿಗೆ ಪೂರಕವಾದ ಶೈಕ್ಷಣಿಕ ವಾತಾವರಣ ನಿರ್ಮಿಸಬೇಕು. ಪ್ರಸ್ತುತ ದೇಶದಲ್ಲಿ ಜಾರಿಗೆ ತರಲಾಗಿರುವ ರಾಷ್ಟ್ರೀಯ ಶಿಕ್ಷಣ ನೀತಿ ಇದಕ್ಕೆ ಪೂರಕವಾಗಿದೆ. ಇದರಲ್ಲಿ ಅಳವಡಿಸಲಾಗಿರುವ ಬಹುಶಿಸ್ತೀಯ ಕಲಿಕಾ ವ್ಯವಸ್ಥೆ ವಿಮರ್ಶಾತ್ಮಕ ಪ್ರಬಂಧ, ಸಂಶೋಧನೆ, ನಾವೀನ್ಯತೆಗೆ ಒತ್ತು ನೀಡುತ್ತದೆ. ಪ್ರತಿ ವಿದ್ಯಾರ್ಥಿಯನ್ನೂ ಪರಿಪೂರ್ಣ ವ್ಯಕ್ತಿಯಾಗಿಸಲು ಸಹಕಾರಿಯಾಗಲಿದೆ ಎಂದು ತಿಳಿಸಿದರು.



ನಗರದಲ್ಲಿ ಸೇಂಟ್ ಜೋಸೆಫ್ ವಿಶ್ವವಿದ್ಯಾಲಯವನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಉದ್ಘಾಟಿಸಿದರು. ಬಸವರಾಜ ಬೊಮ್ಮಾಯಿ, ಥಾವರ್‌ಚಂದ್ ಗೆಹಲೋತ್, ಅಶ್ವತ್ಥ ನಾರಾಯಣ, ಡಾ। ಪೀಟರ್ ಮಚಾದೋ ಇದ್ದರು.

**ಎಸ್‌ಜೆಯು ಸೇವೆ ಶ್ಲಾಘನೀಯ:** ಕಳೆದ 140 ವರ್ಷಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ನಿರಂತರ ಸೇವೆ ಮಾಡುತ್ತಾ ಬೆಳೆದಿರುವ ಸೇಂಟ್ ಜೋಸೆಫ್ ಶಿಕ್ಷಣ ಸಂಸ್ಥೆಯು ಇಂದು ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿರುವುದು ಶ್ಲಾಘನೀಯ. ಈ ಸಂಸ್ಥೆಯಲ್ಲಿ ಓದಿದ ಅನೇಕ ಮಂದಿ ಇಂದು ಕಲೆ, ವಿಜ್ಞಾನ, ಕ್ರೀಡೆ, ತಂತ್ರಜ್ಞಾನ, ಸಾರ್ವಜನಿಕ ಸೇವೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ತಮ್ಮದೇ ಆದ ಸೇವೆ ಸಲ್ಲಿಸುತ್ತಿದ್ದಾರೆ. ವಿದ್ಯಾರ್ಥಿಗಳ ಸಾಧನೆಯಲ್ಲಿ ಶಿಕ್ಷಣ ಸಂಸ್ಥೆಯ ಸಾಧನೆ ಪ್ರತಿಬಿಂಬಿಸುತ್ತದೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ ಎಂದು ರಾಷ್ಟ್ರಪತಿ ಹೇಳಿದರು.

ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್, ಉನ್ನತ ಶಿಕ್ಷಣ ಸಚಿವ ಡಾ। ಸಿ.ಎನ್. ಅಶ್ವತ್ಥ ನಾರಾಯಣ, ಬೆಂಗಳೂರು ಆರ್ಚ್ ಬಿಷಪ್ ಡಾ। ಪೀಟರ್ ಮಚಾದೋ, ಸೇಂಟ್ ಜೋಸೆಫ್ ವಿವಿಯ ಕುಲಾಧಿಪತಿ ಡಿಯೋನ್ಯೆಸಿಯಸ್ ವಾಜ್ ಉಪಸ್ಥಿತರಿದ್ದರು.

### ಇದು ಜ್ಞಾನದ ಶತಮಾನ: ಸಿಎಂ ಬೊಮ್ಮಾಯಿ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, ಶತಮಾನದ ಇತಿಹಾಸವಿರುವ ಸೇಂಟ್ ಜೋಸೆಫ್ ಶಿಕ್ಷಣ ಸಂಸ್ಥೆಯು ರಾಜ್ಯ, ದೇಶದಲ್ಲೂ ಹೆಸರು ಮಾಡಿದೆ. ಶಿಕ್ಷಣ ಕ್ಷೇತ್ರದಲ್ಲಿ ನಿರಂತರ ಸೇವೆ ಮೂಲಕ ರಾಜ್ಯ ಹಾಗೂ ಬೆಂಗಳೂರಿನ ಅಭಿವೃದ್ಧಿಗೆ ತನ್ನದೇ ಕೊಡುಗೆ ನೀಡಿದೆ. ರಾಜ್ಯದ ಇಂತಹ ಶಿಕ್ಷಣ ಸಂಸ್ಥೆಗಳ ಫಲವಾಗಿ ದೇಶದ ಬೇರೆ ಬೇರೆ ರಾಜ್ಯದ ವಿದ್ಯಾರ್ಥಿಗಳ ಜೊತೆಗೆ ವಿದೇಶಿಯರ ಮಕ್ಕಳು ಕೂಡ ಇಂದು ತಮ್ಮ ಶಿಕ್ಷಣಕ್ಕೆ ಬೆಂಗಳೂರನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಗಣ್ಯಾತಿ ಗಣ್ಯರು ಬೆಂಗಳೂರಿಗೆ ಬಂದರೂ ವಿಧಾನಸೌಧಕ್ಕೆ ಬರುತ್ತಿಲ್ಲ. ಬದಲಿಗೆ ಪ್ರಖ್ಯಾತ ಇಸ್ರೋ, ಇನ್ಫೋಸಿಸ್‌ನಂತಹ ಸಂಸ್ಥೆಗಳಿಗೆ ಭೇಟಿ ನೀಡುತ್ತಿದ್ದಾರೆ. 21ನೇ ಶತಮಾನ ಜ್ಞಾನದ ಶತಮಾನವಾಗಿದೆ. ಇದಕ್ಕೆ ಪೂರಕವಾಗಿ ನಮ್ಮ ಶಿಕ್ಷಣ ಸಂಸ್ಥೆಗಳು ನಮ್ಮ ಮಕ್ಕಳಿಗೆ ಶಿಕ್ಷಣ ನೀಡಬೇಕು ಎಂದರು.

# ಕಾಂಕ್ರೀಟ್ ಚರಂಡಿ ಕಾಮಗಾರಿ ಶುರು

**ಬೊಮ್ಮನಹಳ್ಳಿ:** ಹೊಂಗಸಂದ್ರ ವ್ಯಾಪ್ತಿಯಲ್ಲಿ ಮಳೆಯಿಂದಾಗಿ ಸಾಕಷ್ಟು ತೊಂದರೆ ಆಗುತ್ತಿದ್ದು, ಇದನ್ನು ಸರಿಪಡಿಸುವ ನಿಟ್ಟಿನಲ್ಲಿ ನಿರಂತರ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಶಾಸಕ ಎಂ.ಸತೀಶ್ ರೆಡ್ಡಿ ತಿಳಿಸಿದರು.

ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಹೊಂಗಸಂದ್ರ, ಎಚ್.ಎಸ್.ಆರ್. ಬಡಾವಣೆ ಹಾಗೂ ಅಗರ ವ್ಯಾಪ್ತಿಯ ತಗ್ಗು ಪ್ರದೇಶಗಳಿಗೆ ಅಧಿಕಾರಿಗಳ ಜೊತೆ ಭೇಟಿ ನೀಡಿ, ₹358 ಕೋಟಿ ವೆಚ್ಚದ ಕಾಂಕ್ರೀಟ್ ಡ್ರೈನ್ ಹಾಗೂ ರಸ್ತೆ ಕಾಮಗಾರಿಗಳಿಗೆ ಹೊಂಗಸಂದ್ರದಲ್ಲಿ ಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಶಾಸಕರು, ಹೊಂಗಸಂದ್ರ ಹಾಗೂ ಹಲವೆಡೆ ಮಳೆ ಬಂದಾಗ ಪ್ರತಿ ಬಾರಿ ನೀರು ನುಗ್ಗಿ ಜನ ತೊಂದರೆ ಅನುಭಸುತ್ತಿದ್ದರು. ಈಗಾಗಲೇ ಮುಖ್ಯಮಂತ್ರಿಗಳು ನಗರ ಯೋಜನೆ ಅಡಿ ಹಣ ಬಿಡುಗಡೆ ಮಾಡಿದ್ದು, ಹಂತ ಹಂತವಾಗಿ ಕಾಮಗಾರಿಗಳನ್ನು ಮಾಡಲಾಗುತ್ತಿದೆ. ಮುಂದೆ ಮಳೆಯಾದರೆ ಮತ್ತೆ ತೊಂದರೆ ಆಗಬಾರದು ಎನ್ನುವ ನಿಟ್ಟಿನಲ್ಲಿ ಅಧಿಕಾರಿಗಳ ಜೊತೆ ಕಳೆದ 15 ದಿನಗಳಲ್ಲಿ ಮೂರು ನಾಲ್ಕು ಬಾರಿ ಸಭೆ ನಡೆಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಈಗಾಗಲೇ ತಾಕೀತು ಮಾಡಿದ್ದೇನೆ ಎಂದು ಹೇಳಿದರು.

ಮಹಾನಗರ ಪಾಲಿಕೆ ಮಾಜಿ ಸದಸ್ಯ ಗುರುಮೂರ್ತಿ ರೆಡ್ಡಿ, ಹೊಂಗಸಂದ್ರ ವಾರ್ಡ್ ಬಿಜೆಪಿ ಅಧ್ಯಕ್ಷ ಬಾಬುರೆಡ್ಡಿ, ಸಮಾಜ ಸೇವಕ ಶ್ರೀನಿವಾಸ ರೆಡ್ಡಿ, ಕಾರ್ಯಪಾಲಕ ಅಭಿಯಂತರ ಪಾಪಯ್ಯ ರೆಡ್ಡಿ, ಸಹಾಯಕ ಕಾರ್ಯಪಾಲಕ ಅಭಿಯಂತರ ರವಿಕುಮಾರ್ ಇದ್ದರು.



ಮಳೆ ಹಿನ್ನೆಲೆಯಲ್ಲಿ ತಗ್ಗು ಪ್ರದೇಶಗಳಿಗೆ ನೀರು ನುಗ್ಗುತ್ತಿದ್ದ ಬೊಮ್ಮನಹಳ್ಳಿ ವ್ಯಾಪ್ತಿಯ ಹೊಂಗಸಂದ್ರದಲ್ಲಿ ರಸ್ತೆ, ಚರಂಡಿ ಕಾಮಗಾರಿಗೆ ಶಾಸಕ ಎಂ.ಸತೀಶ್ ರೆಡ್ಡಿ ಚಾಲನೆ ನೀಡಿದರು. ಗುರುಮೂರ್ತಿ ರೆಡ್ಡಿ, ಬಾಬುರೆಡ್ಡಿ, ಶ್ರೀನಿವಾಸ ರೆಡ್ಡಿ, ಪಾಪಯ್ಯ ರೆಡ್ಡಿ, ರವಿಕುಮಾರ್ ಮುಂತಾದವರು ಇದ್ದರು.



ವಿಜಯ ನಗರ ವಿಧಾನಸಭಾ ಕ್ಷೇತ್ರದ ಗಾಳಿ ಆಂಜನೇಯ ದೇವಸ್ಥಾನ ವಾರ್ಡಲ್ಲಿ ಶ್ರೀ ವಿನಾಯಕ ಗೆಳೆಯರ ಬಳಗದ ವತಿಯಿಂದ ಆಯೋಜಿಸಿದ್ದ ಗಣೇಶೋತ್ಸವಕ್ಕೆ ಬಿಜೆಪಿ ಮುಖಂಡರೂ ಆಗಿರುವ ಬಿಬಿಎಂಪಿ ಮಾಜಿ ಸದಸ್ಯ ಕೆ.ಉಮೇಶ್ ಶೆಟ್ಟಿ ಚಾಲನೆ ನೀಡಿದರು. ಈ ವೇಳೆ ಸಮಾಜ ಸೇವಕ ಬಿ.ಎಸ್.ಆನಂದ್ ಮತ್ತು ಎ.ಜಿ. ಆನಂದಗೌಡ, ಆರ್ಯ ನವೀನ್ ಸೇರಿದಂತೆ ಇತರರನ್ನು ಸನ್ಮಾನಿಸಲಾಯಿತು.

# ದಸರಾ ಮಹೋತ್ಸವಕ್ಕೆ ಮಕ್ಕಳ ಸಾಂಸ್ಕೃತಿಕ ನೃತ್ಯದ ಮೆರುಗು

**ಯಲಹಂಕ:** ಇಲ್ಲಿನ ಬ್ಯಾಟರಾಯನಪುರದ ಮೈದಾನದಲ್ಲಿ ಆಯೋಜಿಸಿರುವ ದಸರಾ ಮಹೋತ್ಸದ ಎರಡನೇ ದಿನವಾದ ಮಂಗಳವಾರ ಬ್ರಹ್ಮಚಾರಿಣಿ ದೇವಿಯನ್ನು ವಿಶೇಷವಾಗಿ ಪೂಜೆ ಮಾಡುವ ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮದ ಸ್ಪರ್ಧೆಯಲ್ಲಿ ನೂರಾರು ಮಕ್ಕಳು ಪಾಲ್ಗೊಂಡು ದಸರಾ ಮಹೋತ್ಸವಕ್ಕೆ ರಂಗು ತಂದರು.

ಆರು ಎಕರೆಯ ಬೃಹತ್ ವೇದಿಕೆಯಲ್ಲಿ ಕಾರ್ಯಕ್ರಮಕ್ಕೆ ಬಂದಿದ್ದ ನೂರಾರು ಮಹಿಳೆಯರು ಶಿವನನ್ನು ಪಡೆಯಲು ಕಠಿಣ ತಪಸ್ಸನ್ನು ಮಾಡಿದ ಪಾರ್ವತಿಯ ರೂಪವಾದ ಬ್ರಹ್ಮಚಾರಣಿಗೆ ವಿಶೇಷ ಪೂಜೆ ಸಲ್ಲಿಸಿದರು. ಪಕ್ಕದಲ್ಲೇ ಇರುವ ಆಯೋಧ್ಯೆ ರಾಮಮಂದಿರದ ಪ್ರತಿಕೃತಿ ಸ್ಥಾಪಿಸಲಾಗಿರುವ ವೇದಿಕೆಯಲ್ಲಿ ಸಂಜೆ 6ರಿಂದ ರಾತ್ರಿ 9.30ರವರೆಗೆ 20 ತಂಡಗಳು ಭಾಗವಹಿಸಿದ್ದವು. ಒಂದೊಂದು ತಂಡದಲ್ಲಿ 16 ವಯಸ್ಸಿನ ಒಳಗಿನ ಮಕ್ಕಳು ಲಂಬಾಣಿ ವೇಷಭೂಷಣ, ದೇಶಭಕ್ತಿ, ಕನ್ನಡ ಸಂಸ್ಕೃತಿಯನ್ನು ಬಿಂಬಿಸುವುದು ಸೇರಿದಂತೆ ನಾನಾ ರೀತಿಯ ನೃತ್ಯವನ್ನು ಪ್ರದರ್ಶಿದರು.

ಮಕ್ಕಳೊಂದಿಗೆ ಪೋಷಕರು ಹಾಜರಿದ್ದು, ಕಾರ್ಯಕ್ರಮಕ್ಕೆ ಮೆರಗು ನೀಡಿದರು. ದಸರಾ ಕಾರ್ಯಕ್ರಮಕ್ಕೆ ಬ್ಯಾಟರಾಯನಪುರ ಕ್ಷೇತ್ರದ ಬಿಜೆಪಿ ಮುಖಂಡ ಹಾಗೂ ಮಾಜಿ ನಗರಸಭಾ ಸದಸ್ಯ ಕೆ.ಎ.ಮುನೀಂದ್ರ ಅವರು ವಿಜೇತ ತಂಡಕ್ಕೆ ಬಹುಮಾನ ನೀಡಿ ಗೌರವಿಸಿದರು.



ಬ್ಯಾಟರಾಯನಪುರದ ಜಕ್ಕೂರಿನಲ್ಲಿ ದಸರಾ ಮಹೋತ್ಸದಲ್ಲಿ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿತ್ತು.

**ಧ್ವನಂತರಿ ಹೋಮ** | ವಿಜ್ಞಾನದಿಂದ ರಕ್ಷಣೆ, ಧಾರ್ಮಿಕ ಕಾರ್ಯದಿಂದ ಶಕ್ತಿ | ಮುಖ್ಯಮಂತ್ರಿ ಬೊಮ್ಮಾಯಿ ಅಭಿಮತ

# 'ವಿಜ್ಞಾನ-ಆಧ್ಯಾತ್ಮ ಒಂದೇ ನಾಣ್ಯದ 2 ಮುಖ'

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ವಿಜ್ಞಾನ ಮತ್ತು ಆಧ್ಯಾತ್ಮಿಕತೆಯು ಒಂದೇ ನಾಣ್ಯದ ಎರಡು ಮುಖ್ಯಗಳಿದ್ದಂತೆ. ವಿಜ್ಞಾನವು ಆಧ್ಯಾತ್ಮಿಕತೆಗೆ ಕಾರಣವಾಗುತ್ತದೆ ಮತ್ತು ಆಧ್ಯಾತ್ಮಿಕತೆಯು ವಿಜ್ಞಾನಕ್ಕೆ ಸ್ಫೂರ್ತಿ ನೀಡುತ್ತದೆ. ಇದು ನಿರಂತರ ಪ್ರಕ್ರಿಯೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಮಂಗಳವಾರ ಕಾಚರಕನಹಳ್ಳಿಯ ದಕ್ಷಿಣ ಅಯೋಧ್ಯೆ ಕೋದಂಡಸ್ವಾಮಿ ದೇವಾಲಯದಲ್ಲಿ ಸ್ವಾಮಿ ವಿವೇಕಾನಂದ ಸೇವಾ ಸಮಿತಿ ವತಿಯಿಂದ ನಡೆದ ಸಮಾರಂಭದಲ್ಲಿ ಮಾತನಾಡಿದ ಅವರು, ಧಾರ್ಮಿಕ ಚಟುವಟಿಕೆಗಳು ಆತ್ಮಸ್ಥೈರ್ಯ ಮತ್ತು ಸ್ಫೂರ್ತಿ ತುಂಬಿದರೆ, ವಿಜ್ಞಾನವು ವಿವಿಧ ಆವಿಷ್ಕಾರಗಳನ್ನು ಸಾಧಿಸುವ ಕೆಲಸ ಮಾಡುತ್ತದೆ. ಮಾನವರಿಗೆ ಆರೋಗ್ಯದ ರಕ್ಷ ಕವಚವನ್ನು ಒದಗಿಸುತ್ತದೆ. ವೈರಾಲಜಿ ಅಧ್ಯಯನಕ್ಕಾಗಿ ಎನ್‌ಐವಿ ದಕ್ಷಿಣ ವಲಯ ಕೇಂದ್ರದ ನಿರ್ಮಾಣಕ್ಕೆ ಅಡಿಪಾಯ ಹಾಕಲಾಗಿದೆ. ವಿಜ್ಞಾನಿಗಳು ಧಾರ್ಮಿಕ ಮತ್ತು ಆಧ್ಯಾತ್ಮಿಕತೆಯಲ್ಲಿ ನಂಬಿಕೆ ಇಟ್ಟು ಮನುಕುಲದ ಒಳಿತಿಗಾಗಿ ಸಂಶೋಧನೆ ನಡೆಸುತ್ತಿದ್ದಾರೆ ಎಂದು ತಿಳಿಸಿದರು.

ಧನ್ವಂತರಿ ಹೋಮವು ವಿಜ್ಞಾನ ಮತ್ತು ಆಧ್ಯಾತ್ಮಿಕತೆ ಸಂಗಮವಾಗಿದೆ. ಎರಡು ಸಹ ಅವಶ್ಯಕತೆ ಇದ್ದು, ಆಧ್ಯಾತ್ಮ ಆತ್ಮಸ್ಥೈರ್ಯ ತುಂಬುವ ಮತ್ತು ಪ್ರೇರಣೆ ನೀಡುವ ಕೆಲಸ ಮಾಡುತ್ತದೆ. ಆ ಸ್ಫೂರ್ತಿಯಿಂದ ಜ್ಞಾನದ ಬಲದಿಂದ ವಿಜ್ಞಾನ ಹತ್ತಾರು ಆವಿಷ್ಕಾರ ಮಾಡಿ ರಕ್ಷಾ ಕವಚದಂತೆ ಕೆಲಸ ಮಾಡಲಿದೆ ಎಂದು ಹೇಳಿದ ಅವರು, ನಮ್ಮ ಜೀವನ ಶೈಲಿ ಬೇರೆ ಬೇರೆಯಾಗಿದ್ದರಿಂದ ಹಲವು ರೀತಿಯ ರೋಗ ರುಜಿನಗಳನ್ನು ಮಾನವ ಧರ್ಮವನ್ನು ಕಾಡುತ್ತಿದೆ. ಇದನ್ನು ನಿವಾರಣೆ ಮಾಡಲು ರೋಗನಿರೋಧಕ ಶಕ್ತಿಯನ್ನು ಪಡೆಯಬೇಕು. ಇದಕ್ಕಾಗಿ ಮಹಾಧನ್ವಂತರಿಯ ಪ್ರಾರ್ಥನೆಯಿಂದ ಅದು ಸಾಧ್ಯ. ಆತಂಕಗಳು, ಆರೋಗ್ಯದ ಸವಾಲುಗಳನ್ನು ಎದುರಿಸಿ ಸುಖ-ಶಾಂತಿ ತುಂಬುವ ಪ್ರಕ್ರಿಯೆಯೇ ಧನ್ವಂತರಿ ಹೋಮ. ಈ ಯಾಗವು ಇಡೀ ಜಗತ್ತಿಗೆ ಉತ್ತಮ ಆರೋಗ್ಯ, ಶಾಂತಿ ಮತ್ತು ಸಮೃದ್ಧಿಯನ್ನು ಖಚಿತಪಡಿಸುತ್ತದೆ. ಇದರಲ್ಲಿ ನಾವುಗಳು ಭಾವಹಿಸುವುದೇ ಪುಣ್ಯ ಎಂದು ಅಭಿಪ್ರಾಯಪಟ್ಟರು.



ಕಾಚರಕನಹಳ್ಳಿಯ ದಕ್ಷಿಣ ಅಯೋಧ್ಯೆ ಕೋದಂಡಸ್ವಾಮಿ ದೇವಾಲಯದಲ್ಲಿ ಸ್ವಾಮಿ ವಿವೇಕಾನಂದ ಸೇವಾ ಸಮಿತಿ ವತಿಯಿಂದ ನಡೆದ ಸಮಾರಂಭದಲ್ಲಿ ನಡೆದ ಧನ್ವಂತರಿ ಹೋಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಭಾಗವಹಿಸಿದ್ದರು.

# ನವರಾತ್ರಿ ಪ್ರಯುಕ್ತ ವಿದ್ಯಮಾನ್ಯ ವಿದ್ಯಾ ಕೇಂದ್ರ ಶಾಲೆಯಲ್ಲಿ ಗೊಂಬೆ ಪ್ರದರ್ಶನ

## ಶ್ರೀರಾಮ, ಶ್ರೀಕೃಷ್ಣನ ಜೀವನ ಚರಿತ್ರೆ ಅನಾವರಣ | ತಿರುಪತಿ ಬೆಟ್ಟದ ಆಕರ್ಷಣೆ



ಬೆಂಗಳೂರಿನ ಉತ್ತರ ತಾಲೂಕಿನ ಅಂದ್ರಹಳ್ಳಿಯಲ್ಲಿರುವ ವಿದ್ಯಮಾನ್ಯ ವಿದ್ಯಾಕೇಂದ್ರ ಶಾಲೆಯಲ್ಲಿ ನವರಾತ್ರಿ ಪ್ರಯುಕ್ತ ಪಟ್ಟದ ಗೊಂಬೆಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ.

• **ಕನ್ನಡಪ್ರಭ ವಾರ್ತೆ** ಪೀಣ್ಯದಾಸರಹಳ್ಳಿ

ನವರಾತ್ರಿ ಶುರುವಾದರೆ ಸಾಕು ಮನೆ ಮನೆಗಳಲ್ಲಿ ಗೊಂಬೆಗಳನ್ನು ಕೂರಿಸುವ ಸಂಪ್ರದಾಯ ಕ್ಷೀಣಿಸುತ್ತಿರುವ ಸಂದರ್ಭದಲ್ಲಿ ಬೆಂಗಳೂರಿನ ಅಂದ್ರಹಳ್ಳಿಯ ವಿದ್ಯಮಾನ್ಯ ವಿದ್ಯಾಕೇಂದ್ರ ಶಾಲೆಯು ಮುಂದಿನ ಪೀಳಿಗೆಗೆ ಇತಿಹಾಸ, ಪುರಾಣ ಕಥೆಗಳನ್ನು ಬಿಂಬಿಸುವ ಬೊಂಬೆಗಳನ್ನು ಕೂರಿಸುವ ಮೂಲಕ ನವರಾತ್ರಿ ಮುಗಿಯುವವರೆಗೆ ಸಾರ್ವಜನಿಕ ದರ್ಶನಕ್ಕೆ ಅನುವು ಮಾಡಿಕೊಟ್ಟಿದೆ.

ಬೆಂಗಳೂರು ಉತ್ತರ ತಾಲೂಕಿನ ಅಂದ್ರಹಳ್ಳಿಯಲ್ಲಿರುವ ವಿದ್ಯಮಾನ್ಯ ವಿದ್ಯಾಕೇಂದ್ರ ಶಾಲೆಯಲ್ಲಿ ಪಟ್ಟದ ಗೊಂಬೆಗಳ ಜೊತೆಗೆ ತ್ರೇತಾಯುಗದಲ್ಲಿ ಶ್ರೀರಾಮನ ಹುಟ್ಟಿನಿಂದ ಹಿಡಿದು ಸೀತೆಯೊಂದಿಗೆ ವನವಾಸ, ರಾವಣನ ವಧೆ, ಪಟ್ಟಾಭಿಷೇಕ, ಲವಕುಶರ ಜನನ, ಅವರ ಬಿಲ್ವಿದ್ಯೆಯವರೆಗೆ ಗೊಂಬೆಗಳನ್ನು ಅನುಕ್ರಮವಾಗಿ ಜೋಡಿಸಲಾಗಿದೆ. ದ್ವಾಪರಯುಗದ ಶ್ರೀ ಕೃಷ್ಣ ಅವತಾರವನ್ನೂ ಹುಟ್ಟಿನಿಂದ ಕುರುಕ್ಷೇತ್ರದವರೆಗೆ ಗೊಂಬೆಗಳ ಮೂಲಕ ಬಿಂಬಿಸಲಾಗಿದೆ.

ತಿರುಪತಿ ತಿರುಮಲ ಬೆಟ್ಟ, ಪದ್ಮಾವತಿ-ಶ್ರೀನಿವಾಸ, ಬ್ರಹ್ಮರಥೋತ್ಸವದ ಬಗೆಗಳನ್ನು ಕಣ್ಣಿಗೆ ಕಟ್ಟುವಂತೆ ಜೋಡಿಸಲಾಗಿದೆ. ಸಪ್ತ ಮಾತೃಕೆಯರು. ಅಷ್ಟ ಲಕ್ಷ್ಮಿಯರ ವಿವಿಧ ಭಂಗಿಗಳು ಮನಸೆಳೆದರೆ ಪುರಿ ಜಗನ್ನಾಥ ಕ್ಷೇತ್ರ, ರಥ ಆಕರ್ಷಿತವಾಗಿವೆ.

ದಸರಾ ಮೆರವಣಿಗೆ ದೃಶ್ಯವನ್ನಂತೂ ಅಲ್ಲಿಯೇ ನಿಂತು ದಸರಾ ಜಂಬೂ ಸವಾರಿ ನೋಡಿದ ಅನುಭವವಾಗುತ್ತದೆ. ಅರಮನೆ ಬೀದಿ, ಚಾಮುಂಡಿ ಬೆಟ್ಟ, ಮೃಗಾಲಯ, ಕೆ.ಆರ್.ಎಸ್ ಜಲಾಶಯ, ಮೈಸೂರು ಪಟ್ಟಣದ ಬೀದಿಗಳ ನಿರ್ಮಾಣದ ಮೂಲಕ ಇಡೀ ಸಾಂಸ್ಕೃತಿಕ ರಾಜಧಾನಿ ಮೈಸೂರು ನಗರವನ್ನು ಅದ್ಭುತವಾಗಿ ಗೊಂಬೆಗಳ ಮೂಲಕ ಕಟ್ಟಲಾಗಿದೆ. ಹಳ್ಳಿ ಜನಜೀವನ ಹಾಗೂ ಅವರ ರೈತಾಪಿ ಬದುಕನ್ನು ಸಹ ಸೃಷ್ಟಿಸಲಾಗಿದೆ.

ಸಂಪ್ರದಾಯ, ಸಂಸ್ಕೃತಿಗಳ ಪರಿಚಯ ಸಹ ಮಾಡಿಕೊಡಬೇಕಾಗುತ್ತದೆ. ಆ ನಿಟ್ಟಿನಲ್ಲಿ ದಸರಾ ಬೊಂಬೆಗಳ ಪ್ರದರ್ಶನ ಏರ್ಪಡಿಸಲಾಗಿದ್ದು, ಸಾರ್ವಜನಿಕರಿಗೂ ಮುಕ್ತವಾಗಿದೆ ಎಂದು ಶಾಲೆಯ ಕಾರ್ಯದರ್ಶಿ ಭರತ್ ಸೌಂದರ್ಯ ತಿಳಿಸಿದರು.



ಏಷ್ಯಾನೆಟ್ ಸುವರ್ಣ ನ್ಯೂಸ್ ಮತ್ತು ಕನ್ನಡ ಪ್ರಭ ನಡೆಸುತ್ತಿರುವ ದಾಸರಹಳ್ಳಿ ಸಂಭ್ರಮ ಕಾರ್ಯಕ್ರಮದ ಪೋಸ್ಟರನ್ನು ಬಾಗಲಗುಂಟೆಯ ಕಚೇರಿಯಲ್ಲಿ ಮಾಜಿ ಶಾಸಕ ಎಸ್.ಮುನಿರಾಜು ಬಿಡುಗಡೆಗೊಳಿಸಿದರು. ಮಂಡಲ ಬಿಜೆಪಿ ಅಧ್ಯಕ್ಷ ಎನ್.ಲೋಕೇಶ್, ಪ್ರಧಾನ ಕಾರ್ಯದರ್ಶಿಗಳಾದ ಪಿ.ಎಚ್.ರಾಜು, ವಿನೋದ್ ಗೌಡ, ಡಿ.ಕೆ.ಮಹೇಶ್, ಬಿಜೆಪಿ ಮುಖಂಡರಾದ ಟಿ.ಎಸ್.ಗಂಗರಾಜು, ಕೃಷ್ಣಮೂರ್ತಿ, ಶೆಟ್ಟಿಹಳ್ಳಿ ಸುರೇಶ್, ಎಚ್.ಎನ್.ಗಂಗಾಧರ್, ಲಾರಿ ಮುನಿರಾಜು, ಸತೀಶ್ ಬಿ.ಆರ್, ಸಂದೀಪ್ ಸಿಂಗ್, ಗುರುಪ್ರಸಾದ್, ನಿಸರ್ಗ ಕೆಂಪರಾಜು ಇದ್ದರು.